**ಪ್ರಮಾಣೀಕರಿಸಲಾದ ದಿನಾಂಕಃ–** 03.02.2026.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್ ಕೆ ಆರ್ ವಕೀಲರಿಂದಃ–**

ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದಲು, ಬರೆಯಲು ಬರುತ್ತದೆ. ನಾನು II PUC ವರೆಗೂ ಓದಿದ್ದೇನೆ. ನನ್ನ ಆದಾಯಕ್ಕೆ 4 ಎಕರೆ ಕಾಫಿ ತೋಟ, 2 ಎಕರೆ ಅಡಿಕೆ ತೋಟ, 6 ಎಕರೆ ಭತ್ತದ ಗದ್ದೆ ಇರುತ್ತದೆ. ಇವುಗಳಲ್ಲಿ ವ್ಯವಸಾಯ ಮಾಡಲು ಆಳುಗಳ ಖರ್ಚು ತುಂಬಾ ಇರುತ್ತದೆ. ನಾನು ನನ್ನ ತಾಯಿ ಇಬ್ಬರೇ ಮನೆಯಲ್ಲಿರುವುದು. ಕೂಲಿ ಕೆಲಸಗಾರರನ್ನು ಊರಿನಿಂದಲೇ ಕರೆಸಿಕೊಳ್ಳುತ್ತೇವೆ. ನಮ್ಮಲ್ಲಿ ಕೆಲಸಗಾರರು ಇವತ್ತು ಬಂದವರು ನಾಳೇ ಬರುವುದಿಲ್ಲ. ಸಂಪತ್, ಉಮೇಶ್ ಇವರು ನನ್ನ ಖಾಯಂ ಕೆಲಸಗಾರರು ಬೇರೆ ಕೆಲಸಗಾರರನ್ನು ಕರೆದುಕೊಂಡು ಬರುತ್ತಾರೆ. ನಮ್ಮ ಊರಿನಲ್ಲಿ ಜಯಂತಿ ಕಾಲೋನಿಯಿಂದ ಮಹಿಳೆ ಆಳುಗಳು ಬರುತ್ತಾರೆ.

ಆರೋಪಿಯನ್ನು ಪ್ರಕರಣದ ದಾಖಲಾಗಿನಿಂದ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ, 2015 ರಿಂದ ಪರಿಚಯ. ಮಾರ್ಚ್ 2015 ರಂದು ಹುಣಸೂರಿಗೆ ಶುಂಠಿಯ Materials ಅನ್ನು ತರಲು ಅಂಗಡಿಗೆ ಹೋದಾಗ ಆರೋಪಿ ಪರಿಚಯವಾಗಿರುತ್ತಾರೆ. 988015447 ಆರೋಪಿಯ ಮೊಬೈಲ್ ಸಂಖ್ಯೆ. ನಾನೇ ಪ್ರಕರಣದ ಸಂಪೂರ್ಣ ಮಾಹಿತಿ ಕೊಟ್ಟಿರುತ್ತೇನೆ. 2015 ರಿಂದ ಪರಿಚಯ ಎಂದು ದೂರಿನಲ್ಲಿ ಹೇಳಿಲ್ಲ. ನನ್ನ ದೂರಿನಲ್ಲಿ 2 – 3 ವರ್ಷದಿಂದ ಪರಿಚಯ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದೂರಿನ 1 ನೇ ಕಂಡಿಕೆಯಲ್ಲಿ ಆರೋಪಿ 2 ವರ್ಷದಿಂದ ಪರಿಚಯ ಎಂದು ಹೇಳಿರುವುದು ಸರಿ, ಅದರ ಅರ್ಥ ಹಣಕಾಸಿನ ವ್ಯವಹಾರದ ಬಗ್ಗೆ ಆಗಿರುತ್ತದೆ. ಗೋವಿಂದ ಗೌಡ ಎಂಬ ವ್ಯಕ್ತಿಯ ಹೆಸರಿನವರ ವಿರುದ್ಧ ಈ ದೂರು ಹಾಕಿರುತ್ತೇನೆ. ಆರೋಪಿಯ ತಂದೆ ಹೆಸರು ಲೇಟ್ ಕೆಂಚೇ ಗೌಡ. ಅವರ ಹೆಸರು ನನಗೆ ಗೊತ್ತಿರಲಿಲ್ಲ, ಆದ್ದರಿಂದ ದೂರಿನಲ್ಲಿ ಹೇಳಿರುವುದಿಲ್ಲ. ಆರೋಪಿಯ

ವಯಸ್ಸನ್ನು ನಾನು ಕೇಳಿರುವುದಿಲ್ಲ, ಆದ್ದರಿಂದ ನನಗೆ ಗೊತ್ತಿಲ್ಲ. ಆರೋಪಿ Civil Contractor ಹುಣಸೂರಿನಲ್ಲಾಗಿದ್ದರು. ಅದರ ಜೊತೆ Real estate ಅನ್ನು ಹುಣಸೂರಿನಲ್ಲಿ ಮಾಡುತ್ತಿದ್ದು ನಮ್ಮ ಕಡೆಯು ಜಮೀನುಗಳನ್ನು ನೋಡಿಕೊಂಡು ಹೋಗಿರುತ್ತಾರೆ. ದಿ. 23.01.2024 ರಂದು ಆರೋಪಿ ನಮ್ಮ ಮನೆಗೆ ಬಂದಿದ್ದರು. ಒಂದು ವಾರದ ಹಿಂದೆ ಹಣ ಬೇಕು ಎಂದು ಕೇಳಿದ್ದು ಅದನ್ನು ತೆಗೆದುಕೊಂಡು ಹೋಗಲು ಬಂದಿದ್ದರು. ಈ ಹಿಂದೆಯೂ ಸಣ್ಣ ಪುಟ್ಟ ಹಣ ಪಡೆದಿದ್ದು ಅದನ್ನು ತೀರಿಸಿದ್ದರು. 2018– 2019 ರಲ್ಲಿ ರೂ. 25 ಸಾವಿರ ಹಣ ಪಡೆದಿದ್ದರು,

ಆರೋಪಿ ಮೊದಲ ಬಾರಿಗೆ 2017 ರಲ್ಲಿ ನಮ್ಮ ಮನೆಗೆ ಸ್ನೇಹ ವಿಶ್ವಾಸಕ್ಕೆ ಬಂದಿದ್ದರು. ಸುಮಾರು 10 ಬಾರಿ ಮನೆಗೆ ಬಂದಿದ್ದರು, ನಮ್ಮ ಊರು ಕಡೆಗೆ ಬಂದಾಗಲೆಲ್ಲ ಮನೆಗೆ ಬಂದು ಹೋಗುತ್ತಿದ್ದರು. ದಿ. 24.01.2024 ರಂದು ಕೊನೆಯ ಬಾರಿ ನಮ್ಮ ಮನೆಗೆ ಬಂದಿದ್ದರು. ದಿ. 23.01.2024 ರಂದು ಆರೋಪಿ ನಮ್ಮ ಮನೆಗೆ ಬಂದು ಹಣ ಇಲ್ಲ ಎಂದು ಹೇಳಿದ್ದರು ನೇರವಾಗಿ ಬಂದು ಹಣ ಕೇಳಿರುತ್ತಾರೆ. ಬಿಲ್ ಪಾಸಾಗುತ್ತಿಲ್ಲ, ಕೆಲಸಗಾರರಿಗೆ ಹಣ ಕೊಡಬೇಕೆಂದು ಕೇಳಿರುತ್ತಾರೆ. ಅದೇ ದಿನ ರೂ. 5 ಲಕ್ಷ ಹಣ ಕೇಳಿರುತ್ತಾರೆ. ನಾನು ಅಷ್ಟು ಕೊಡಲಾಗುವುದಿಲ್ಲ ಎಂದು ಹೇಳಿ ರೂ. 2 ವರೆ ಲಕ್ಷಕ್ಕೆ ಚೆಕ್ ಕೊಡುತ್ತೇನೆ ಎಂದು ಹೇಳಿದರು ಒಪ್ಪಲಿಲ್ಲ. ಮರುದಿನ ಒಂದುಕಾಲು ಲಕ್ಷ ಹಣವನ್ನು ಬ್ಯಾಂಕ್ ನಿಂದ ವಿತ್ ಡ್ರಾ ಮಾಡಿ ಮತ್ತು ಮನೆಯಲ್ಲಿದ್ದ ಒಂದುಕಾಲು ಲಕ್ಷ ಹಣ ಸೇರಿ ಒಟ್ಟು 2 ವರೆ ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಇದರ Bank statement ಅನ್ನು ಕೊಟ್ಟಿಲ್ಲ. ಮೇಲೆ ಹೇಳಿದಂತೆ ನನಗೆ ಆದಾಯವಿದ್ದು ಮನೆಯಲ್ಲಿ ಒಂದುಕಾಲು ಲಕ್ಷ ಹಣ ನಗದು ಇತ್ತು. ನಗದು ಹಣ ಇದ್ದ ಬಗ್ಗೆ ದಾಖಲೆ ಇಲ್ಲ. ಆದ್ದರಿಂದ ನನ್ನ ಹತ್ತಿರ ಆ ದಿನ ಕೊಡಲು 2 ವರೆಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಹಣ ಕೊಟ್ಟಾಗ ನನ್ನ ತಾಯಿ ಇದ್ದರು. ನನ್ನ ತಾಯಿಗೆ ವಯಸ್ಸಾಗಿದೆ ಆದ್ದರಿಂದ ಅವರು ಸಾಕ್ಷ್ಯ ಕೊಡಲಾಗುವುದಿಲ್ಲ. ನನ್ನ ತಾಯಿ ಬಂದು ಸಾಕ್ಷ್ಯ ಹೇಳಿದರೆ ಸತ್ಯ ಗೊತ್ತಾಗುತ್ತದೆ ಎಂದು ಅವರ ಸಾಕ್ಷ್ಯ

ಹೇಳಿಸಲಾಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯ ಜೊತೆ ನನ್ನ ಸ್ನೇಹ ಚೆನ್ನಾಗಿದ್ದು ಈ ಹಿಂದೆಯೂ ಸಾಕಷ್ಟು ಬಾರಿ ಹಣ ಪಡೆದಿದ್ದಕ್ಕೆ ಕರಾರು ಮಾಡಿಕೊಂಡಿರುವುದಿಲ್ಲ. 2019 ರಲ್ಲಿ ಆರೋಪಿ ಒಂದು ಲಕ್ಷ ಹಣವನ್ನು ನೇರವಾಗಿ ಮನೆಗೆ ಬಂದು ಪಡೆದಿದ್ದರು. ಅದು ಬಿಟ್ಟರೆ ರೂ 2 ವರೆ ಲಕ್ಷ ಹಣಕಾಸಿನ ವ್ಯವಹಾರವಾಗಿರುತ್ತದೆ. ಬಾಯಿಮಾತಿನಂತೆ ಮತ್ತು ನಂಬಿಕೆ ಮೇಲೆ ಹಿಂದೆ ಹಣ ಕೊಟ್ಟಿದ್ದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ